
ಸತ್ಯಗಳಾಗಿವೆ. ಪ್ರೀತಿ, ಕಾರುಣ್ಯ, ಇವೆಲ್ಲ ದುರ್ಬಲ ಮನಸ್ಸುಗಳ ಖಾಲಿ ಭ್ರಮೆಗಳು ಮಾತ್ರ. ಮನುಷ್ಯನು ವಿಕಾಸವಾದ ಹೇಳುವಂತೆ ಪಶುತ್ವದಿಂದ ಬುದ್ಧಿಶಕ್ತಿ ಇರುವ ಜೀವಿ homo-sapiens ಆಗಿದ್ದಾನೆ ಎನ್ನುವುದು ಒಂದು ವೈಜ್ಞಾನಿಕ ಮಿಥ್ಯೆ. ಈ ಕಥನಗಳನ್ನು ಓದುತ್ತಾ ಈ ನನ್ನ ನಂಬಿಕೆಗಳು ಬಲವಾದವು. ಮನುಷ್ಯ ಕುಲದ ನಿರಂತರ ವಾಸ್ತವವೆಂದರೆ ಕೆಡುಕು (Evil) ಮಾತ್ರವೆಂಬ ನಂಬಿಕೆ ಗಟ್ಟಿಯಾಯಿತು. ಆದರೆ ಗರಿಮಾ ಅವರ ಕೃತಿಯು ಇದನ್ನು ಹೇಳುವುದೇ ಇಲ್ಲ. ಅವರ ಜೊತೆ ಸಂಭಾಷಿಸಿದ ಕ್ರೊವೇಶಿಯದ ಮಹಿಳೆಯರು ಕೂಡ ಹೀಗೆ ಹೇಳುವುದಿಲ್ಲ, ನಮ್ಮ ಎಲ್ಲಾ ಜ್ಞಾನ, ತಿಳಿವಳಿಕೆ ಇವುಗಳನ್ನು ಮೀರಿದ ಒಂದು ಜೀವಶಕ್ತಿ ಈ ಮಹಿಳೆಯರಲ್ಲಿದೆ. ಕನಸು ಕಾಣುವ ಶಕ್ತಿಯಿದೆ. ಹೀಗಾಗಿ ಈ ಕೃತಿ ಸುಲಭವಾದ ನಿರಾಶಾವಾದವನ್ನು ಹೇಳುವುದಿಲ್ಲ. (ಮೇಲಿನ ಕೆಲವು ವಾಕ್ಯಗಳಲ್ಲಿರುವುದು ನನ್ನ ನಿರಾಶಾವಾದ). ಭಾವುಕತೆಯಿಂದ ಮಹಿಳೆಯರ ಧಾರಣಾಶಕ್ತಿಯನ್ನು ವಿಜೃಂಭಿಸುವುದೇ ಇಲ್ಲ. ಸಾಹಿತ್ಯದ ಅತ್ಯುತ್ತಮ ಬರಹವು ಹೇಳುವಂತೆ, 'ಇದು ಇದೆ, ಇದ್ದೇ ಇದೆ, ಆದರೆ ಇನ್ನೇನೋ ಇದೆ' ಎನ್ನುವುದನ್ನು ಮೆಲುದನಿಯಲ್ಲಿ ನಿವೇದಿಸುತ್ತದೆ.

ಒಂದು ಆಪ್ತ ನಿವೇದನೆ ಹಾಸೆಸಿಸ್ ಎನ್ನುವ ಹೆಣ್ಣಿನದು. ಸರ್ಬಿಯಾದ ಸೈನಿಕರು ಒಂದು ದಿನ ವಿಜೆಗ್ರಾದ್‌ನಲ್ಲಿಯ ಪೊಲೀಸ್ ಠಾಣೆಗೆ ಕರೆದೊಯ್ದರು. ಅಲ್ಲಿಯ ನೆಲಮಾಳಿಗೆಯಲ್ಲಿ ಅವಳನ್ನು ಕೂಡಿ ಹಾಕಲಾಯಿತು... ಆಕೆ ಅಲ್ಲಿ ಮಿಲಾನ್ ಲ್ಯುಸಿಕ್ ಮತ್ತು ಸ್ರ್ಟೇಜೋ ಲ್ಯೂಸಿಕ್ ಅವರನ್ನು ನೋಡಿದಳು. ಆಕೆ ಮಿಲಾನ್‌ನನ್ನು ಗುರುತಿಸುತ್ತಿದ್ದಳು. ಆತ ಚಾಕು ತೆಗೆದು ಬಟ್ಟೆ ಕಳಚುವಂತೆ ಒತ್ತಾಯಿಸುತ್ತಿದ್ದ. ಮೊದಮೊದಲು ಆತ ಹಾಸ್ಯ ಮಾಡುತ್ತಿದ್ದಾನೆಂದುಕೊಂಡಳು. ಯಾಕೆಂದರೆ ಆತ ಈಕೆಗೆ ಚೆನ್ನಾಗಿ ಪರಿಚಿತ. ಹೀಗೆಲ್ಲಾ ಮಾಡಲು ಸಾಧ್ಯವಿಲ್ಲವೆಂದುಕೊಂಡಿದ್ದಳು. ವಿಚಿತ್ರವೆಂದರೆ ಅನೇಕ ವರ್ಷಗಳಿಂದ ಈತ ಆಕೆಯ ನೆರೆಮನೆಯವನಾಗಿದ್ದ...

...ಅತ್ಯಾಚಾರ ಅವಳಿಗೆ (ಈಗ) ನಿತ್ಯದ ಅನುಭವವಾಗಿತ್ತು. ಯಾರಾದರೂ ಸೈನಿಕರು ನೆಲಮಾಳಿಗೆಗೆ ಇಳಿದು ಬರುತ್ತಿದ್ದರೆ ಹೆಜ್ಜೆಯ ಸಪ್ಪಳಗಳನ್ನು ಕೇಳಿಯೇ ಆಕೆ ಬಟ್ಟೆ ಕಳಚಲು ಸಿದ್ಧವಾಗುತ್ತಿದ್ದಳು...




**ದೇಹವೇ ದೇಶ**

ಲೇ: ಗರಿಮಾ ಶ್ರೀವಾಸ್ತವ, ಕನ್ನಡಕ್ಕೆ: ವಿಕ್ರಮ ವಿಸಾಜಿ
ಪು: 218: ಬೆ: ರೂ. 250
ಪ್ರ: ಛಂದ ಪುಸ್ತಕ, ಬೆಂಗಳೂರು.
ಫೋನ್: 9945939436

...ಒಳಗೆ ನೂರಾರು ಗಾಯಗಳನ್ನು ಹೊತ್ತುಕೊಂಡು ನಿಂತಿದ್ದಳು. ಆಕೆಗೆ ಗೊತ್ತಿತ್ತಂತೆ. ಒಂದಲ್ಲ ಒಂದು ದಿನ ಈ ಯಾತನೆ ಕೊನೆಗೊಳ್ಳುತ್ತದೆ... ತನ್ನ ಮಕ್ಕಳನ್ನು ಭೇಟಿಯಾಗುವ ದಿನ ಬಂದೇ ಬರುವುದೆಂಬ ಆಶಾವಾದವನ್ನು ಆಕೆ ಎಂದೂ ಕಳೆದುಕೊಳ್ಳಲಿಲ್ಲ.

ಹೀಗೆ ಗೆಳತಿ ಲಿಲಿಯಾನಳಿಗೆ ಅವಳು ಹೇಳುತ್ತಾಳೆ, ಲಿಲಿಯಾನಾ ಗರಿಮಾ ಅವರಿಗೆ ಅದನ್ನು ಅನುವಾದ ಮಾಡಿ ಹೇಳುತ್ತಾಳೆ. ಆಗ ಲಿಲಿಯಾನಾ ಕೇಳುತ್ತಾಳೆ:

"ನಿನಗೆ ತುಂಬ ಸಂಕಟವಾಯಿತಲ್ಲವೆ?"

ಆಗ ಹಾಸೆಸಿಸ್ ಹೇಳುತ್ತಾಳೆ:

"ನನ್ನನ್ನು ಕೆಳಗೆ ಹಾಕಿ ಅವರು ಅತ್ಯಾಚಾರ ಮಾಡುತ್ತಿದ್ದಾಗ ನನಗೆ ನಾನೇ ಹೇಳಿಕೊಳ್ಳುತ್ತಿದ್ದೆ: ನಾನೊಂದು ಹೊಲಸು ಗಟಾರ. ಅಲ್ಲಿ ಏನೇನೋ ಹೊಲಸು ಹಾದುಹೋಗುತ್ತಿದೆ. ಒಂದಲ್ಲ ಒಂದು ದಿನ ಈ ಅವಸ್ಥೆಯಿಂದ ನನಗೆ ಮುಕ್ತಿ ದೊರೆಯುವುದು. ನನ್ನ ಮಕ್ಕಳ ಮುಗ್ಧ ಮುಖಗಳು ಕಣ್ಣೆದುರಿಗೆ ಬರುತ್ತಿದ್ದವು. ನಾನು ಬದುಕಲು ಅದೊಂದು ಆಸರೆಯಾಗಿತ್ತು. ಕೊನೆಗೊಂದು ದಿನ ಯುದ್ಧ ನಿಂತಿತ್ತು. ನಾನು ಮನೆಗೆ